# ಕನ್ನಡ ಸಾಹಿತ್ಯದಲ್ಲಿ ನಾಟಕದ ಮಹತ್ವ

**ಜೀವಿತ ಡಿ.***

**DOI: https://doi.org/10.5281/zenodo.22107090**

**ABSTRACT**

ಕನ್ನಡ ಸಾಹಿತ್ಯದಲ್ಲಿ ನಾಟಕವು ಪ್ರಮುಖ ಸಾಹಿತ್ಯ ಪ್ರಕಾರಗಳಲ್ಲಿ ಒಂದಾಗಿದೆ. ಇದು ಕೇವಲ ಮನರಂಜನೆಯ ಸಾಧನವಲ್ಲ, ಸಮಾಜದ ಜೀವನ, ಸಂಸ್ಕೃತಿ, ಮೌಲ್ಯಗಳು ಮತ್ತು ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ಜನರಿಗೆ ತಲುಪಿಸುವ ಒಂದು ಪ್ರಮುಖ ಸಂವಹನ ಮಾಧ್ಯಮವಾಗಿದೆ.

ನಾಟಕದ ಪ್ರಮುಖ ಮಹತ್ವಗಳು: ಸಾಮಾಜಿಕ ಜಾಗೃತಿಯನ್ನು ಮೂಡಿಸುವುದು, ಅಂದರೆ ಸಮಾಜದಲ್ಲಿರುವ ಅನ್ಯಾಯ, ಅಸಮಾನತೆ, ಮೂಢನಂಬಿಕೆ ಮತ್ತು ಇತರ ಸಮಸ್ಯೆಗಳ ಬಗ್ಗೆ ಜನರಲ್ಲಿ ಅರಿವು ಉಂಟುಮಾಡುವುದು. ಪ್ರೇಕ್ಷಕರಿಗೆ ಸಂತೋಷ, ಉಲ್ಲಾಸ ಮತ್ತು ಕಲಾತ್ಮಕ ಅನುಭವವನ್ನು ನೀಡುವುದರೊಂದಿಗೆ ಮನರಂಜನೆಗೊಳಿಸುವುದು. ಕನ್ನಡದ ಸಂಸ್ಕೃತಿ, ಪರಂಪರೆ, ಭಾಷೆ ಮತ್ತು ಆಚರಣೆಗಳನ್ನು ಉಳಿಸಿ ಬೆಳೆಸಲು ಸಹಕಾರಿಯಾಗಿ ಸಂಸ್ಕೃತಿಯ ಸಂರಕ್ಷಣೆ ಮಾಡುವುದು. ಸತ್ಯ, ಧರ್ಮ, ಪ್ರಾಮಾಣಿಕತೆ, ಮಾನವೀಯತೆ ಮುಂತಾದ ನೈತಿಕ ಮೌಲ್ಯಗಳನ್ನು ಬೋಧಿಸುವುದರೊಂದಿಗೆ ಬೆಳವಣಿಗೆಗೆ ಸಹಕಾರಿಯಾಗುವುದು. ಸುಂದರ ಸಂಭಾಷಣೆಗಳ ಮೂಲಕ ಕನ್ನಡ ಭಾಷೆಯ ಸೊಗಸು ಮತ್ತು ಅಭಿವ್ಯಕ್ತಿಯನ್ನು ವೃದ್ಧಿಸುವುದು. ಅಭಿನಯ, ಸಂವಹನ ಕೌಶಲ್ಯ, ಆತ್ಮವಿಶ್ವಾಸ ಮತ್ತು ಮಂದಿಯೊಂದಿಗೆ ಜೊತೆಗೂಡಿ ಕೆಲಸ ಮಾಡುವ ಗುಣಗಳನ್ನು ಬೆಳೆಸುತ್ತಾ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗುವುದು.

**KEYWORDS:** ಸಾಮಾಜಿಕ ಅರಿವು, ವ್ಯಕ್ತಿತ್ವ ವಿಕಸನ, ಸಂಸ್ಕೃತಿಯ ಸಂರಕ್ಷಣೆ, ಭಾಷಾ ಅಭಿವೃದ್ಧಿ, ನೈತಿಕ ಮೌಲ್ಯ.

* **ಜೀವಿತ ಡಿ.,** ಸಹ ಪ್ರಾಧ್ಯಾಪಕಿ, ಕನ್ನಡ ವಿಭಾಗ, ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜ್ ಆಫ್ ಬಿಸಿನೆಸ್ ಮ್ಯಾನೇಜ್ಮೆಂಟ್, ಮಂಗಳೂರು.

ಕನ್ನಡ ಸಾಹಿತ್ಯವು ಭಾರತದ ಅತ್ಯಂತ ಪ್ರಾಚೀನ ಮತ್ತು ಸಮೃದ್ಧ ಸಾಹಿತ್ಯ ಪರಂಪರೆಗಳಲ್ಲಿ ಒಂದಾಗಿದೆ. ಕಾವ್ಯ, ಗದ್ಯ, ಕಥೆ, ಕಾದಂಬರಿ, ಪ್ರಬಂಧ, ಜೀವನಚರಿತ್ರೆ, ಪ್ರವಾಸಕಥನ, ವಚನ ಸಾಹಿತ್ಯ ಮುಂತಾದ ಅನೇಕ ಪ್ರಕಾರಗಳ ಜೊತೆಗೆ ನಾಟಕವೂ ಕನ್ನಡ ಸಾಹಿತ್ಯದ ಪ್ರಮುಖ ಅಂಗವಾಗಿದೆ. ನಾಟಕವು ಕೇವಲ ಓದಲು ಮಾತ್ರವಲ್ಲ, ರಂಗಭೂಮಿಯ ಮೇಲೆ ಪ್ರದರ್ಶಿಸಲು ರಚಿಸಲ್ಪಡುವ, ದೃಶ್ಯ ಹಾಗೂ ಶ್ರವ್ಯವನ್ನು ಏಕಕಾಲದಲ್ಲಿ ಹೊಂದಿರುವ ಸಾಹಿತ್ಯ ಪ್ರಕಾರವಾಗಿದೆ. ಆದ್ದರಿಂದ ಇದು ಸಾಹಿತ್ಯ, ಸಂಗೀತ, ನೃತ್ಯ, ಅಭಿನಯ ಮತ್ತು ದೃಶ್ಯ ಕಲೆಯ ಸಮನ್ವಯವನ್ನು ಹೊಂದಿರುವ ವಿಶಿಷ್ಟ ಕಲಾರೂಪವಾಗಿದೆ. ನಾಟಕವು ಸಮಾಜದ ಪ್ರತಿಬಿಂಬವಾಗಿದ್ದು, ಜನರ ಜೀವನ, ಸಂಸ್ಕೃತಿ, ನಂಬಿಕೆಗಳು, ಸಮಸ್ಯೆಗಳು ಮತ್ತು ಆಶಯಗಳನ್ನು ಪರಿಣಾಮಕಾರಿಯಾಗಿ ಚಿತ್ರಿಸುತ್ತದೆ. ಕನ್ನಡ ಸಾಹಿತ್ಯದ ಬೆಳವಣಿಗೆಯಲ್ಲಿ ನಾಟಕವು ಮಹತ್ವದ ಪಾತ್ರವನ್ನು ವಹಿಸಿದ್ದು, ಜನರಲ್ಲಿ ಜಾಗೃತಿ ಮೂಡಿಸುವ, ಮನರಂಜನೆ ನೀಡುವ ಹಾಗೂ ಮಾನವೀಯ ಮೌಲ್ಯಗಳನ್ನು ಬೆಳೆಸುವ ಶಕ್ತಿಯುತ ಸಂವಹನ ಮಾಧ್ಯಮವಾಗಿದೆ.

ಕನ್ನಡ ಸಾಹಿತ್ಯದಲ್ಲಿ ನಾಟಕವು ಪ್ರಮುಖ ಸಾಹಿತ್ಯ ಪ್ರಕಾರಗಳಲ್ಲಿ ಒಂದಾಗಿದ್ದು ಇದು ಕೇವಲ ಮನರಂಜನೆಯ ಸಾಧನವಲ್ಲ, ಸಮಾಜದ ಜೀವನ, ಸಂಸ್ಕೃತಿ, ಮೌಲ್ಯಗಳು ಮತ್ತು ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ಜನರಿಗೆ ತಲುಪಿಸುವ ಮಾಧ್ಯಮವಾಗಿದೆ. ಸಾಮಾಜಿಕ ಜಾಗೃತಿಯ ಮೂಲಕ ಸಮಾಜದಲ್ಲಿರುವ ಅನ್ಯಾಯ, ಅಸಮಾನತೆ, ಮೂಢನಂಬಿಕೆ ಮತ್ತು ಇತರ ಸಮಸ್ಯೆಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸುತ್ತದೆ. ಮನರಂಜನೆಯ ಸಾಧನವಾಗಿ ಪ್ರೇಕ್ಷಕರಿಗೆ ಸಂತೋಷ, ಉಲ್ಲಾಸ ಮತ್ತು ಕಲಾತ್ಮಕ ಅನುಭವವನ್ನು ನೀಡುತ್ತದೆ. ಸಂಸ್ಕೃತಿಯ ಸಂರಕ್ಷಣೆ ಮಾಡುವ ಮಹತ್ತರವಾದ ಜವಾಬ್ದಾರಿಯನ್ನು ಹೊತ್ತು ಕನ್ನಡದ ಸಂಸ್ಕೃತಿ, ಪರಂಪರೆ, ಭಾಷೆ ಮತ್ತು ಆಚರಣೆಗಳನ್ನು ಉಳಿಸಿ ಬೆಳೆಸಲು ಸಹಕಾರಿಯಾಗಿದೆ. ನೈತಿಕ ಮೌಲ್ಯಗಳ ಬೆಳವಣಿಗೆಯ ರೂವಾರಿಯಾಗಿ ಸತ್ಯ, ಧರ್ಮ, ಪ್ರಾಮಾಣಿಕತೆ, ಮಾನವೀಯತೆ ಮುಂತಾದ ಮೌಲ್ಯಗಳನ್ನು ಬೋಧಿಸುತ್ತದೆ. ಭಾಷೆಯ ಅಭಿವೃದ್ಧಿಯನ್ನು ಸುಂದರ ಸಂಭಾಷಣೆಗಳ ಮೂಲಕ ಸೊಗಸಾಗಿ ಮತ್ತು ಪರಿಣಾಮಕಾರಿಯಾಗಿ ಅಭಿವ್ಯಕ್ತಿಸಿ ಜನಮಾನಸದಲ್ಲಿ ನೈತಿಕತೆಯನ್ನು ವೃದ್ಧಿಸುತ್ತದೆ. ವ್ಯಕ್ತಿತ್ವ ವಿಕಾಸವನ್ನು ಅಭಿನಯ, ಸಂವಹನ ಕೌಶಲ್ಯ, ಆತ್ಮವಿಶ್ವಾಸ ಮತ್ತು ತಂಡದೊಂದಿಗೆ ಕೆಲಸ ಮಾಡುವ ಗುಣಗಳನ್ನು ಬೆಳೆಸುತ್ತದೆ.

ಕನ್ನಡ ನಾಟಕದ ಹಿನ್ನೆಲೆಯ ಕುರಿತು ನೋಡುವಾಗ ಕನ್ನಡ ನಾಟಕದ ಇತಿಹಾಸವು ಜನಪದ ಕಲಾ ಪರಂಪರೆಯೊಂದಿಗೆ ನಿಕಟ ಸಂಬಂಧ ಹೊಂದಿದೆ. ಯಕ್ಷಗಾನ, ತಾಳಮದ್ದಲೆ, ಬಯಲಾಟ, ಗೊಂಬೆಯಾಟ ಮುಂತಾದ ಜನಪದ ಕಲಾಪ್ರಕಾರಗಳು ಕನ್ನಡ ನಾಟಕದ ಬೆಳವಣಿಗೆಗೆ ಭದ್ರ ಅಡಿಪಾಯವನ್ನು ಹಾಕಿವೆ. ಈ ಜನಪದ ಕಲಾರೂಪಗಳು ಗ್ರಾಮೀಣ ಜನರ ಜೀವನವನ್ನು ಪ್ರತಿಬಿಂಬಿಸುವುದರ ಜೊತೆಗೆ ಪುರಾಣ, ಇತಿಹಾಸ ಮತ್ತು ಜನಪದ ಕಥೆಗಳನ್ನು ರಂಗರೂಪದಲ್ಲಿ ಜನರಿಗೆ ತಲುಪಿಸಿವೆ. ಆಧುನಿಕ ಕನ್ನಡ ನಾಟಕವು ಹತ್ತೊಂಬತ್ತನೇ ಶತಮಾನದಲ್ಲಿ ಹೊಸ ರೂಪವನ್ನು ಪಡೆಯಿತು. ಶಿಕ್ಷಣದ ವಿಸ್ತರಣೆ, ಪಾಶ್ಚಾತ್ಯ ಸಾಹಿತ್ಯದ ಪ್ರಭಾವ ಮತ್ತು ರಂಗಭೂಮಿಯ ಬೆಳವಣಿಗೆಯಿಂದ ಕನ್ನಡ ನಾಟಕ ಹೊಸ ದಿಕ್ಕಿನಲ್ಲಿ ಸಾಗಿತು. ನಂತರ ಸಾಮಾಜಿಕ, ಐತಿಹಾಸಿಕ, ಪೌರಾಣಿಕ ಹಾಗೂ ಮನೋವೈಜ್ಞಾನಿಕ ನಾಟಕಗಳು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದವು.

ನಾಟಕದ ಸ್ವರೂಪವನ್ನು ಅವಲೋಕಿಸಿದರೆ ನಾಟಕವು ಸಂಭಾಷಣೆ, ಅಭಿನಯ, ಸಂಗೀತ, ವೇಷಭೂಷಣ, ರಂಗಸಜ್ಜಿಕೆ ಹಾಗೂ ದೃಶ್ಯ ವಿನ್ಯಾಸಗಳ ಸಮನ್ವಯದಿಂದ

ರೂಪುಗೊಳ್ಳುವ ಕಲೆಯಾಗಿರುವುದು. ಕಾವ್ಯ ಅಥವಾ ಕಾದಂಬರಿಯನ್ನು ಓದಿದಾಗ ಮನಸ್ಸಿನಲ್ಲಿ ಕಲ್ಪಿಸಿಕೊಳ್ಳಬೇಕಾಗುತ್ತದೆ, ಆದರೆ ನಾಟಕದಲ್ಲಿ ಕಥೆ ನೇರವಾಗಿ ಪ್ರೇಕ್ಷಕರ ಕಣ್ಮುಂದೆ ನಡೆಯುತ್ತದೆ. ಆದ್ದರಿಂದ ಅದರ ಪ್ರಭಾವ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ. ನಾಟಕವು ಲೇಖಕ, ನಿರ್ದೇಶಕ, ನಟರು ಮತ್ತು ಪ್ರೇಕ್ಷಕರನ್ನು ಒಂದೇ ವೇದಿಕೆಯಲ್ಲಿ ಬೆಸೆಯುವ ಜೀವಂತ ಕಲೆಯಾಗಿದೆ. ನಾಟಕವು ಸಮಾಜದ ಕನ್ನಡಿಯಾಗಿದೆ. ಸಮಾಜದಲ್ಲಿರುವ ಸಮಸ್ಯೆಗಳು, ಅಸಮಾನತೆ, ಶೋಷಣೆ, ಬಡತನ, ನಿರುದ್ಯೋಗ, ಭ್ರಷ್ಟಾಚಾರ, ಮಹಿಳೆಯರ ಸ್ಥಿತಿ, ಜಾತಿ ವ್ಯವಸ್ಥೆ ಮತ್ತು ಸಾಮಾಜಿಕ ಅನ್ಯಾಯಗಳನ್ನು ನಾಟಕಗಳು ಪರಿಣಾಮಕಾರಿಯಾಗಿ ಚಿತ್ರಿಸುತ್ತವೆ. ಪ್ರೇಕ್ಷಕರು ತಮ್ಮ ಜೀವನದ ವಾಸ್ತವತೆಯನ್ನು ನಾಟಕದಲ್ಲಿ ಕಂಡು ಆತ್ಮಾವಲೋಕನ ಮಾಡಿಕೊಳ್ಳುವ ಅವಕಾಶವನ್ನು ಪಡೆಯುತ್ತಾರೆ. ಸಾಮಾಜಿಕ ಜಾಗೃತಿಯನ್ನು ಮೂಡಿಸುವ ಸಾಮಾಜಿಕ ಮಾಧ್ಯಮವು ನಾಟಕ ಸಮಾಜದಲ್ಲಿ ಜಾಗೃತಿ ಮೂಡಿಸುವುದರೊಂದಿಗೆ ಅತ್ಯಂತ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವುದು. ಬಾಲ್ಯವಿವಾಹ, ಅಸ್ಪೃಶ್ಯತೆ, ವರದಕ್ಷಿಣೆ, ಮದ್ಯಪಾನ, ಪರಿಸರ ಸಂರಕ್ಷಣೆ, ಶಿಕ್ಷಣದ ಮಹತ್ವ, ಮಹಿಳಾ ಸಬಲೀಕರಣ ಮುಂತಾದ ವಿಷಯಗಳ ಕುರಿತು ಅನೇಕ ನಾಟಕಗಳು ಜನರಲ್ಲಿ ಅರಿವು ಮೂಡಿಸಿವೆ. ಮನರಂಜನೆಯ ಜೊತೆಗೆ ಸಂದೇಶವನ್ನು ನೀಡುವ ಸಾಮರ್ಥ್ಯ ನಾಟಕಕ್ಕಿದೆ. ನಾಟಕದ ಪ್ರಮುಖ ಉದ್ದೇಶಗಳಲ್ಲಿ ಮನರಂಜನೆ ಒಂದು. ಉತ್ತಮ ಕಥೆ, ಹಾಸ್ಯ, ಭಾವನಾತ್ಮಕ ದೃಶ್ಯಗಳು, ಸಂಗೀತ ಮತ್ತು ಅಭಿನಯವು ಪ್ರೇಕ್ಷಕರಿಗೆ ಸಂತೋಷವನ್ನು ನೀಡುತ್ತದೆ. ಮನರಂಜನೆಯ ಮೂಲಕವೇ ಜೀವನದ ಮೌಲ್ಯಗಳನ್ನು ಸುಲಭವಾಗಿ ಜನರಿಗೆ ತಲುಪಿಸಲಾಗುತ್ತದೆ. ನಾಟಕಗಳು ಕನ್ನಡ ಭಾಷೆಯ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸಿವೆ. ಸರಳ, ಸುಂದರ ಮತ್ತು ಪರಿಣಾಮಕಾರಿ ಸಂಭಾಷಣೆಗಳ ಮೂಲಕ ಭಾಷೆಯ ಸೊಗಸು ಜನರಿಗೆ ತಲುಪಿದೆ. ವಿವಿಧ ಪ್ರಾದೇಶಿಕ ಭಾಷಾ ಶೈಲಿಗಳು ಮತ್ತು ಜನಪದ ಪದಗಳು ನಾಟಕಗಳಲ್ಲಿ ಬಳಕೆಯಾಗುವುದರಿಂದ ಕನ್ನಡ ಭಾಷೆಯ ವೈವಿಧ್ಯತೆ ಉಳಿದುಕೊಂಡಿದೆ. ಕನ್ನಡ ನಾಟಕಗಳು ಕರ್ನಾಟಕದ ಸಂಸ್ಕೃತಿ, ಸಂಪ್ರದಾಯ, ಆಚರಣೆ, ಜನಪದ ಕಲೆ, ಉಡುಗೆ–ತೊಡುಗೆ ಹಾಗೂ ಜೀವನಶೈಲಿಯನ್ನು ಸಂರಕ್ಷಿಸುವಲ್ಲಿ ಪ್ರಮುಖ ಪಾತ್ರ ವಹಿಸಿವೆ. ಯಕ್ಷಗಾನ ಮತ್ತು ಇತರ ಜನಪದ ನಾಟಕಗಳ ಮೂಲಕ ಪುರಾತನ ಪರಂಪರೆ ಇಂದಿಗೂ ಜೀವಂತವಾಗಿದೆ. ನಾಟಕಗಳು ಸತ್ಯ, ಪ್ರಾಮಾಣಿಕತೆ, ದಯೆ, ಕರುಣೆ, ನ್ಯಾಯ, ದೇಶಭಕ್ತಿ, ತ್ಯಾಗ ಮತ್ತು ಮಾನವೀಯತೆ ಮುಂತಾದ ಮೌಲ್ಯಗಳನ್ನು ಬೋಧಿಸುತ್ತವೆ. ಉತ್ತಮ ಪಾತ್ರಗಳು ಪ್ರೇರಣೆಯನ್ನು ನೀಡಿದರೆ, ದುಷ್ಟ ಪಾತ್ರಗಳು ಕೆಟ್ಟ ಗುಣಗಳ ಪರಿಣಾಮವನ್ನು ತೋರಿಸುತ್ತವೆ. ಇದರಿಂದ ಸಮಾಜದಲ್ಲಿ ಉತ್ತಮ ಜೀವನ ಮೌಲ್ಯಗಳು ಬೆಳೆಯುವುದರೊಂದಿಗೆ ಸಾಮಾಜಿಕ ಅರಿವು ಹೆಚ್ಚುತ್ತದೆ.

ನಾಟಕವು ಶಿಕ್ಷಣ ಕ್ಷೇತ್ರದಲ್ಲಿಯೂ ಪರಿಣಾಮಕಾರಿ ಸಾಧನವಾಗಿದೆ. ಶಾಲಾ–ಕಾಲೇಜುಗಳಲ್ಲಿ ನಾಟಕಗಳ ಪ್ರದರ್ಶನದಿಂದ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ, ಭಾಷಾ ಕೌಶಲ್ಯ, ನಾಯಕತ್ವ, ತಂಡದೊಂದಿಗೆ ಕೆಲಸ ಮಾಡುವ ಮನೋಭಾವ ಮತ್ತು ಸೃಜನಶೀಲತೆ ಬೆಳೆಯುತ್ತದೆ. ಪಾಠಗಳನ್ನು ನಾಟಕ ರೂಪದಲ್ಲಿ ಕಲಿಸಿದರೆ ಅವು ಹೆಚ್ಚು ಕಾಲ ನೆನಪಿನಲ್ಲಿ ಉಳಿಯುತ್ತವೆ. ನಾಟಕದಲ್ಲಿ ಭಾಗವಹಿಸುವವರು ಅಭಿನಯ, ವಾಕ್ಚಾತುರ್ಯ, ಸಮಯಪ್ರಜ್ಞೆ, ಸಂವಹನ ಕೌಶಲ್ಯ ಮತ್ತು ಸಮಸ್ಯೆ ಪರಿಹರಿಸುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳುತ್ತಾರೆ. ವೇದಿಕೆಯ ಅನುಭವದಿಂದ ಸಂಕೋಚ ದೂರವಾಗಿ ಆತ್ಮವಿಶ್ವಾಸ ಹೆಚ್ಚುತ್ತದೆ. ದೇಶಭಕ್ತಿ, ಏಕತೆ, ಸಹೋದರತ್ವ, ಪ್ರಜಾಪ್ರಭುತ್ವ ಮತ್ತು ಮಾನವ ಹಕ್ಕುಗಳಂತಹ ಮೌಲ್ಯಗಳನ್ನು ನಾಟಕಗಳು ಪರಿಣಾಮಕಾರಿಯಾಗಿ ಜನರಿಗೆ ತಲುಪಿಸುತ್ತವೆ. ರಾಷ್ಟ್ರ ನಿರ್ಮಾಣದಲ್ಲಿ

ನಾಟಕಗಳು ಸಕಾರಾತ್ಮಕ ಪಾತ್ರವನ್ನು ನಿರ್ವಹಿಸುತ್ತವೆ.

ನಾಟಕವು ಲೇಖಕರು, ನಿರ್ದೇಶಕರು, ನಟರು, ಸಂಗೀತಗಾರರು, ವೇಷಭೂಷಣ ವಿನ್ಯಾಸಕಾರರು, ಬೆಳಕು ತಜ್ಞರು ಹಾಗೂ ಇತರ ಕಲಾವಿದರಿಗೆ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲು ಉತ್ತಮ ವೇದಿಕೆಯನ್ನು ಒದಗಿಸುತ್ತದೆ. ಇದರಿಂದ ಕನ್ನಡ ರಂಗಭೂಮಿ ನಿರಂತರವಾಗಿ ಅಭಿವೃದ್ಧಿ ಹೊಂದುತ್ತಿದೆ. ಕನ್ನಡ ಸಾಹಿತ್ಯದ ಬೆಳವಣಿಗೆಯಲ್ಲಿ ನಾಟಕ ಸಾಹಿತ್ಯವು ಮಹತ್ವದ ಸ್ಥಾನವನ್ನು ಹೊಂದಿದೆ. ಅನೇಕ ಶ್ರೇಷ್ಠ ನಾಟಕಕಾರರು ತಮ್ಮ ವಿಶಿಷ್ಟ ಕೃತಿಗಳ ಮೂಲಕ ಕನ್ನಡ ರಂಗಭೂಮಿಯನ್ನು ಶ್ರೀಮಂತಗೊಳಿಸಿದ್ದಾರೆ. ಅವರ ನಾಟಕಗಳು ಕೇವಲ ಮನರಂಜನೆಗೆ ಸೀಮಿತವಾಗದೆ, ಸಮಾಜದ ಸಮಸ್ಯೆಗಳು, ಮಾನವೀಯ ಮೌಲ್ಯಗಳು, ಸಂಸ್ಕೃತಿ, ಇತಿಹಾಸ ಹಾಗೂ ಜೀವನದ ವಿವಿಧ ಆಯಾಮಗಳನ್ನು ಪರಿಣಾಮಕಾರಿಯಾಗಿ ಪ್ರತಿಬಿಂಬಿಸಿವೆ.

ಕನ್ನಡ ಸಾಹಿತ್ಯ ಲೋಕದ ಪ್ರಮುಖ ನಾಟಕಕಾರರಲ್ಲಿ ಟಿ.ಪಿ. ಕೈಲಾಸಂ ಪ್ರಮುಖ ಹಾಸ್ಯ ನಾಟಕಕಾರರಲ್ಲಿ ಒಬ್ಬರು. ಅವರು ಸಾಮಾಜಿಕ ಜೀವನದಲ್ಲಿದ್ದ ಅಂಧಶ್ರದ್ಧೆ, ಮೂಢನಂಬಿಕೆ, ಕಂದಾಚಾರ ಮತ್ತು ಸಾಮಾಜಿಕ ಅಸಮಾನತೆಗಳನ್ನು ಹಾಸ್ಯದ ಮೂಲಕ ಸೂಕ್ಷ್ಮವಾಗಿ ವಿಮರ್ಶಿಸಿದರು. ಅವರ ನಾಟಕಗಳಲ್ಲಿ ಸರಳ ಭಾಷೆ, ಸಹಜ ಸಂಭಾಷಣೆ ಮತ್ತು ಜೀವನಾನುಭವಗಳ ಚಿತ್ರಣ ಕಂಡುಬರುತ್ತದೆ. ಟೊಳ್ಳುಗಟ್ಟಿ ಮತ್ತು ಅಮ್ಮಾವ್ರ ಗಂಡ ಮೊದಲಾದ ಕೃತಿಗಳು ಇಂದಿಗೂ ಜನಪ್ರಿಯವಾಗಿವೆ. ಅವರ ಬರವಣಿಗೆಯಿಂದ ಕನ್ನಡ ನಾಟಕಕ್ಕೆ ಹೊಸ ದಿಕ್ಕು ಮತ್ತು ಹೊಸ ಪರಂಪರೆ ದೊರೆಯಿತು.

ಆದ್ಯ ರಂಗಾಚಾರ್ಯ (ಶ್ರೀರಂಗ) ಅವರು ಸಾಮಾಜಿಕ ಸಮಸ್ಯೆಗಳನ್ನು ಆಳವಾಗಿ ವಿಶ್ಲೇಷಿಸಿದ ನಾಟಕಕಾರರು. ಜಾತಿ ಪದ್ಧತಿ, ಮಹಿಳೆಯರ ಸ್ಥಿತಿ, ಶಿಕ್ಷಣ, ಸಾಮಾಜಿಕ ಸುಧಾರಣೆ ಮತ್ತು ಮಾನವ ಸಂಬಂಧಗಳಂತಹ ವಿಷಯಗಳನ್ನು ತಮ್ಮ ನಾಟಕಗಳಲ್ಲಿ ಪರಿಣಾಮಕಾರಿಯಾಗಿ ಚಿತ್ರಿಸಿದರು. ಅವರ ನಾಟಕಗಳು ಪ್ರೇಕ್ಷಕರಲ್ಲಿ ಚಿಂತನೆ ಮೂಡಿಸುವುದರ ಜೊತೆಗೆ ಸಮಾಜದಲ್ಲಿ ಬದಲಾವಣೆಯ ಅಗತ್ಯವನ್ನು ಮನವರಿಕೆ ಮಾಡಿಕೊಟ್ಟವು. ರಂಗಭೂಮಿಯ ಕಲಾತ್ಮಕತೆಯನ್ನು ಉಳಿಸಿಕೊಂಡು ಸಾಮಾಜಿಕ ಸಂದೇಶವನ್ನು ನೀಡಿದ ಅವರ ಕೊಡುಗೆ ಅಪಾರವಾಗಿದೆ. ಗಿರೀಶ್ ಕಾರ್ನಾಡ್ ಅವರು ಕನ್ನಡ ನಾಟಕವನ್ನು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡ ಪ್ರಮುಖ ನಾಟಕಕಾರರು. ಅವರು ಇತಿಹಾಸ, ಪುರಾಣ ಮತ್ತು ಸಮಕಾಲೀನ ಜೀವನವನ್ನು ಸಮನ್ವಯಗೊಳಿಸಿ ವಿಶಿಷ್ಟ ನಾಟಕಗಳನ್ನು ರಚಿಸಿದರು. ಯಯಾತಿ, ತುಘಲಕ್, ಹಯವದನ, ನಾಗಮಂಡಲ ಮೊದಲಾದ ನಾಟಕಗಳು ಮಾನವ ಮನಸ್ಸಿನ ಸಂಘರ್ಷ, ಅಧಿಕಾರದ ರಾಜಕೀಯ, ವ್ಯಕ್ತಿತ್ವದ ಹುಡುಕಾಟ ಮತ್ತು ಸಾಮಾಜಿಕ ವಾಸ್ತವಗಳನ್ನು ಕಲಾತ್ಮಕವಾಗಿ ಚಿತ್ರಿಸುತ್ತವೆ. ಅವರ ಕೃತಿಗಳು ಅನೇಕ ಭಾರತೀಯ ಹಾಗೂ ವಿದೇಶಿ ಭಾಷೆಗಳಿಗೆ ಅನುವಾದಗೊಂಡು ಕನ್ನಡ ಸಾಹಿತ್ಯಕ್ಕೆ ವಿಶ್ವಮಟ್ಟದ ಗೌರವವನ್ನು ತಂದುಕೊಟ್ಟಿವೆ.

ಚಂದ್ರಶೇಖರ ಕಂಬಾರ ಅವರು ಜನಪದ ಸಂಸ್ಕೃತಿ, ಗ್ರಾಮೀಣ ಜೀವನ ಮತ್ತು ಕನ್ನಡದ ಸಾಂಸ್ಕೃತಿಕ ಪರಂಪರೆಯನ್ನು ಆಧುನಿಕ ನಾಟಕಗಳೊಂದಿಗೆ ಯಶಸ್ವಿಯಾಗಿ ಸಂಯೋಜಿಸಿದ ಪ್ರಮುಖ ನಾಟಕಕಾರರು. ಅವರ ಕೃತಿಗಳಲ್ಲಿ ಜನಪದ ಕಥೆಗಳು, ಹಾಡುಗಳು, ಆಚರಣೆಗಳು ಹಾಗೂ ಗ್ರಾಮೀಣ ಬದುಕಿನ ಸೊಗಡು ಜೀವಂತವಾಗಿ ಮೂಡಿಬರುತ್ತದೆ. ಜೋಕುಮಾರಸ್ವಾಮಿ, ಸಿರಿಸಂಪಿಗೆ ಮುಂತಾದ ನಾಟಕಗಳು ಜನಪದ

ಕಲೆಯ ವೈಶಿಷ್ಟ್ಯವನ್ನು ಆಧುನಿಕ ರಂಗಭೂಮಿಗೆ ಪರಿಚಯಿಸಿವೆ. ಅವರ ಸಾಹಿತ್ಯವು ಕನ್ನಡ ಸಂಸ್ಕೃತಿಯ ಶ್ರೀಮಂತಿಕೆಯನ್ನು ಜಗತ್ತಿಗೆ ಪರಿಚಯಿಸುವಲ್ಲಿ ಮಹತ್ವದ ಪಾತ್ರ ವಹಿಸಿದೆ.

ಒಟ್ಟಾರೆ, ಈ ಶ್ರೇಷ್ಠ ನಾಟಕಕಾರರ ಕೃತಿಗಳು ಕನ್ನಡ ಸಾಹಿತ್ಯವನ್ನು ವೈಚಾರಿಕವಾಗಿ, ಕಲಾತ್ಮಕವಾಗಿ ಮತ್ತು ಸಾಂಸ್ಕೃತಿಕವಾಗಿ ಶ್ರೀಮಂತಗೊಳಿಸಿವೆ. ಅವರು ನಾಟಕವನ್ನು ಕೇವಲ ಮನರಂಜನೆಯ ಮಾಧ್ಯಮವಾಗಿರಿಸದೆ, ಸಮಾಜದಲ್ಲಿ ಜಾಗೃತಿ ಮೂಡಿಸುವ, ಮಾನವೀಯ ಮೌಲ್ಯಗಳನ್ನು ಬೆಳೆಸುವ ಮತ್ತು ಜೀವನದ ಸತ್ಯಗಳನ್ನು ಅನಾವರಣಗೊಳಿಸುವ ಪರಿಣಾಮಕಾರಿ ಕಲಾರೂಪವನ್ನಾಗಿ ರೂಪಿಸಿದರು. ಇವರ ಅಮೂಲ್ಯ ಕೊಡುಗೆಯಿಂದ ಕನ್ನಡ ರಂಗಭೂಮಿಗೆ ಹೊಸ ಚೈತನ್ಯ ದೊರೆತಿದ್ದು, ಇಂದಿಗೂ ಅವರ ನಾಟಕಗಳು ಓದುಗರನ್ನು ಹಾಗೂ ಪ್ರೇಕ್ಷಕರನ್ನು ಸಮಾನವಾಗಿ ಆಕರ್ಷಿಸುತ್ತಿವೆ.

ಆಧುನಿಕ ಕನ್ನಡ ನಾಟಕ ಅಂದರೆ ಇಂದಿನ ಕನ್ನಡ ನಾಟಕಗಳು ಸಮಕಾಲೀನ ಸಮಸ್ಯೆಗಳತ್ತ ಹೆಚ್ಚಿನ ಗಮನ ಹರಿಸುತ್ತಿವೆ. ಪರಿಸರ ಸಂರಕ್ಷಣೆ, ತಂತ್ರಜ್ಞಾನ, ನಗರೀಕರಣ, ಕುಟುಂಬ ವ್ಯವಸ್ಥೆಯ ಬದಲಾವಣೆ, ಯುವಜನರ ಸಮಸ್ಯೆಗಳು, ಮಹಿಳಾ ಹಕ್ಕುಗಳು, ಮಾನಸಿಕ ಆರೋಗ್ಯ, ಜಾಗತೀಕರಣ ಮತ್ತು ಸಾಮಾಜಿಕ ಜಾಲತಾಣಗಳ ಪರಿಣಾಮ ಮುಂತಾದ ವಿಷಯಗಳು ಆಧುನಿಕ ನಾಟಕಗಳಲ್ಲಿ ಪ್ರಮುಖವಾಗಿ ಕಾಣಿಸುತ್ತವೆ. ಪ್ರಯೋಗಾತ್ಮಕ ರಂಗಭೂಮಿಯ ಮೂಲಕ ಹೊಸ ಕಥನಶೈಲಿ ಮತ್ತು ಹೊಸ ಅಭಿನಯ ವಿಧಾನಗಳು ಬೆಳೆಯುತ್ತಿವೆ. ಅದರೊಂದಿಗೆ ಕನ್ನಡ ನಾಟಕ ಅನೇಕ ಸವಾಲುಗಳನ್ನು ಎದುರಿಸುತ್ತಿವೆ. ಇಂದಿನ ಡಿಜಿಟಲ್ ಯುಗದಲ್ಲಿ ಚಲನಚಿತ್ರ, ದೂರದರ್ಶನ ಮತ್ತು ಅಂತರ್ಜಾಲದ ಮನರಂಜನೆಯ ಕಾರಣದಿಂದ ರಂಗಭೂಮಿಗೆ ಕೆಲವು ಸವಾಲುಗಳು ಎದುರಾಗಿವೆ. ಪ್ರೇಕ್ಷಕರ ಸಂಖ್ಯೆ ಕಡಿಮೆಯಾಗುತ್ತಿದೆ, ಆರ್ಥಿಕ ಸಮಸ್ಯೆಗಳು, ಹೊಸ ಕಲಾವಿದರಿಗೆ ಅವಕಾಶಗಳ ಕೊರತೆ ಹಾಗೂ ವಾಣಿಜ್ಯ ಒತ್ತಡಗಳು ಪ್ರಮುಖ ಸವಾಲುಗಳಾಗಿವೆ. ಆದರೂ ಅನೇಕ ನಾಟಕ ತಂಡಗಳು, ಸಾಂಸ್ಕೃತಿಕ ಸಂಸ್ಥೆಗಳು ಮತ್ತು ಯುವ ಕಲಾವಿದರು ಕನ್ನಡ ನಾಟಕದ ಬೆಳವಣಿಗೆಗಾಗಿ ಶ್ರಮಿಸುತ್ತಿದ್ದಾರೆ. ಸರ್ಕಾರ ಮತ್ತು ಸಾರ್ವಜನಿಕರ ಬೆಂಬಲದಿಂದ ರಂಗಭೂಮಿಯನ್ನು ಇನ್ನಷ್ಟು ಬಲಪಡಿಸುವುದು ಸಾಧ್ಯ ಎಂದು ಆ ನಿಟ್ಟಿನಲ್ಲಿ ಪ್ರಯತ್ನವನ್ನು ಮಾಡುತ್ತಿದ್ದಾರೆ. ಈ ಎಲ್ಲಾ ಸವಾಲುಗಳ ಮಧ್ಯೆ ಇಂದಿನ ಸಂದರ್ಭದಲ್ಲಿ ನಾಟಕದ ಪ್ರಸ್ತುತತೆ ಇಂದಿನ ವೇಗದ ಜೀವನದಲ್ಲಿ ನಾಟಕದ ಮಹತ್ವ ಕಡಿಮೆಯಾಗಿಲ್ಲ. ನೇರ ಪ್ರದರ್ಶನದ ಅನುಭವವು ಪ್ರೇಕ್ಷಕರ ಮೇಲೆ ಆಳವಾದ ಪರಿಣಾಮ ಬೀರುತ್ತದೆ. ನಾಟಕವು ಸಮಾಜದಲ್ಲಿ ಸಂವಾದವನ್ನು ಬೆಳೆಸುತ್ತದೆ, ವಿಮರ್ಶಾತ್ಮಕ ಚಿಂತನೆಗೆ ಪ್ರೇರೇಪಿಸುತ್ತದೆ ಮತ್ತು ಮಾನವೀಯ ಸಂಬಂಧಗಳ ಮಹತ್ವವನ್ನು ನೆನಪಿಸುತ್ತದೆ. ಆದ್ದರಿಂದ ಆಧುನಿಕ ಸಮಾಜದಲ್ಲಿಯೂ ನಾಟಕವು ತನ್ನ ಪ್ರಸ್ತುತತೆಯನ್ನು ಉಳಿಸಿಕೊಂಡಿದೆ, ಪ್ರಯತ್ನ ಮುಂದುವರಿಯುತ್ತಿದೆ.

**ಉಪಸಂಹಾರ:**

ಒಟ್ಟಾರೆಯಾಗಿ ಕನ್ನಡ ಸಾಹಿತ್ಯದಲ್ಲಿ ನಾಟಕವು ಅತ್ಯಂತ ಮಹತ್ವದ ಸಾಹಿತ್ಯ ಪ್ರಕಾರವಾಗಿದೆ. ಇದು ಮನರಂಜನೆಯ ಜೊತೆಗೆ ಶಿಕ್ಷಣ, ಸಾಮಾಜಿಕ ಜಾಗೃತಿ, ನೈತಿಕ ಮೌಲ್ಯಗಳ ಬೆಳವಣಿಗೆ, ಭಾಷೆಯ ಅಭಿವೃದ್ಧಿ, ಸಂಸ್ಕೃತಿಯ ಸಂರಕ್ಷಣೆ ಹಾಗೂ ವ್ಯಕ್ತಿತ್ವ ವಿಕಾಸಕ್ಕೆ ಅಪಾರ ಕೊಡುಗೆಯನ್ನು ನೀಡಿದೆ. ಕನ್ನಡ ನಾಟಕವು ಭೂತಕಾಲದ ವೈಭವವನ್ನು ಉಳಿಸಿಕೊಂಡು, ವರ್ತಮಾನದ ಸಮಸ್ಯೆಗಳನ್ನು ಚರ್ಚಿಸಿ, ಭವಿಷ್ಯದ ಉತ್ತಮ ಸಮಾಜ

ನಿರ್ಮಾಣಕ್ಕೆ ದಾರಿದೀಪವಾಗಿದೆ. ಆದ್ದರಿಂದ ಕನ್ನಡ ಸಾಹಿತ್ಯ ಮತ್ತು ಕನ್ನಡ ಸಂಸ್ಕೃತಿಯ ಬೆಳವಣಿಗೆಯಲ್ಲಿ ನಾಟಕಕ್ಕೆ ವಿಶಿಷ್ಟ ಹಾಗೂ ಶಾಶ್ವತ ಸ್ಥಾನ ಹೊಂದಿದೆ. ಕನ್ನಡ ನಾಟಕವನ್ನು ಉಳಿಸಿ ಬೆಳೆಸುವುದು ಪ್ರತಿಯೊಬ್ಬ ಕನ್ನಡಿಗನ ಜವಾಬ್ದಾರಿಯಾಗಿದೆ. ರಂಗಭೂಮಿಯ ಮೇಲಿನ ಆಸಕ್ತಿ ಹೆಚ್ಚಿದಷ್ಟೂ ಕನ್ನಡ ಸಾಹಿತ್ಯದ ಶ್ರೀಮಂತಿಕೆ ಮತ್ತು ಸಾಂಸ್ಕೃತಿಕ ಪರಂಪರೆ ಇನ್ನಷ್ಟು ವಿಕಸಿಸುತ್ತದೆ.

**ಪರಾಮರ್ಶನ ಗ್ರಂಥಗಳು:**

1. ಬಸವರಾಜ ಪಿ. ಡೋಣೂರ, (2007), ಕನ್ನಡ ನಾಟಕ ಮತ್ತು ರಂಗಭೂಮಿ, ಧಾರವಾಡ: ನಿಲಪರ್ವತ್.
2. ಮರುಳಸಿದ್ದಪ್ಪ ಕೆ.,, (1992), ಆಧುನಿಕ ಕನ್ನಡ ನಾಟಕ, ಮೈಸೂರು: ಗೀತಾ ಬುಕ್ ಹೌಸ್ / ಪ್ರಸಾರಾಂಗ, ಮೈಸೂರು ವಿ.ವಿ.
3. ಮುಗಳಿ ರಂ. ಶ್ರೀ., (2018), ಕನ್ನಡ ಸಾಹಿತ್ಯ ಚರಿತ್ರೆ, ಮೈಸೂರು: ಗೀತಾ ಬುಕ್ ಹೌಸ್.